ಮಂದಹಾಸ

# ಕೇಶ ಶಿಲ್ಪಿಗಳ ಗುಂಗಿನಲ್ಲಿ...

**ತಲೆಗೂದಲು ಒಪ್ಪ ಮಾಡಿಸಿಕೊಳ್ಳುವ 'ಕಟ್ಟಿಂಗ್' ಪ್ರಕ್ರಿಯೆ ಸಾಮಾಜಿಕ ಸಂಬಂಧಗಳನ್ನು ರೂಢಿಸಿಕೊಳ್ಳುವ ಪ್ರಯತ್ನವೂ ಹೌದು. ಬಾಲ್ಯದ ಭಾವಕೋಶದಲ್ಲಿನ ಕಟ್ಟಿಂಗ್ ಅನುಭವಗಳನ್ನು ನೆನಪಿಸಿಕೊಳ್ಳುವುದು ಮುಖದಲ್ಲಿ ನಗು ಮೂಡಿಸುವುದಷ್ಟೇ ಅಲ್ಲ; ಸಂದುಹೋದ ಸುಂದರ ಕಾಲದ ಅವಲೋಕನವೂ ಹೌದು.**

**■ ಕೆ.ಪಿ. ಮಂಜುನಾಥ್**



ನನ್ನ ಹರೆಯದ ದಿನಗಳಲ್ಲಿ ನಮ್ಮ ಏರಿಯಾದ ಆ ಕಟ್ಟಿಂಗ್ ಶಾಪಿಗೆ ಹೋಗುವುದೆಂದರೆ ಸಂಭ್ರಮವೋ ಸಂಭ್ರಮ. ಅಂಗಡಿಯೊಳಗೆ ಹೆಜ್ಜೆಯಿಟ್ಟೊಡನೆ ಗಾಜಿನ ಅರಮನೆ ಪ್ರವೇಶಿಸಿದಂತೆ ಭಾಸವಾಗುತ್ತಿತ್ತು. ಅದರ ಭವ್ಯತೆ ಕಂಡು ಬೆರಗಾಗದವರೇ ಇಲ್ಲ. ಕಥೆ–ಪುರಾಣಗಳಲ್ಲಿ ಕೇಳಿದ, ಸಿನಿಮಾಗಳಲ್ಲಿ ನೋಡಿದ ಗಾಜಿನ ಅರಮನೆಯನ್ನು ನೆನಪಿಸುವಂತಹ ತಿಳಿ ಗಾಜು, ಬಣ್ಣದ ಗಾಜಿನಲ್ಲಿ ಸ್ಫಟಿಕದ ಬೆಳಕು ಪ್ರತಿಫಲಿಸುತ್ತಿತ್ತು. ಸುಮಾರು 360 ಡಿಗ್ರಿ ಕೋನ. ಗೋಡೆಯ ಮೂರು ಕಡೆ ಕನ್ನಡಿ. ಮತ್ತೊಂದು ಕಡೆ ಕೈ ಮುಗಿದು ಸ್ವಾಗತ ಕೋರುವ ಮಹಿಳೆಯ ಸ್ಟಿಕ್ಕರ್. ಎಲ್ಲ ಬ್ರ್ಯಾಂಡ್ ಕಂಪನಿಯ ಪೌಡರ್, ಫೇಸ್ ಕ್ರೀಂ ಮುಂತಾದ ಸೌಂದರ್ಯವರ್ಧಕಗಳು ಅಚ್ಚುಕಟ್ಟಾಗಿ ಜೋಡಿಸಲಾಗಿರುತ್ತಿತ್ತು. ಅವು ತುಂಬಿದ ಡಬ್ಬಿಗಳೋ ಖಾಲಿಯೋ ತಿಳಿಯದು...

ಎರಡು ಮೂಲೆಗಳಲ್ಲಿ ತೂಗುಹಾಕಿರುವ ದೊಡ್ಡ ಆಂಪ್ಲಿಫೈಯರ್ ಸ್ಪೀಕರ್‌ಗಳು. ಮತ್ತೊಂದು ಮೂಲೆಯಲ್ಲಿ ಘಮಘಮಿಸುವ ಮಲ್ಲಿಗೆ ಹಾರದಿಂದ ಅಲಂಕೃತ ಸಂಜೀವಿನಿ ಪರ್ವತ ಹೊತ್ತ ಆಂಜನೇಯ ಸ್ವಾಮಿ, ತಿರುಪತಿ ವೆಂಕಟೇಶ್ವರ ಮತ್ತು ಗಣೇಶನ ಫೋಟೊಗಳು. ಅವುಗಳ ಮುಂದೆ ಅಗರಬತ್ತಿ, ಹಚ್ಚಿಟ್ಟ ಸಣ್ಣ ಜೋಡಿ ದೀಪಗಳು. ಪ್ರವೇಶ ದ್ವಾರದಲ್ಲಿ ತೂಗುಹಾಕಿದ್ದ (ತಲೆಗೆ ತಾಕದಂತೆ) ಮಂತ್ರಿಸಲಾದ ಕಪ್ಪು ದೃಷ್ಟಿ ದಾರ ಸುತ್ತಿದ ತೆಂಗಿನಕಾಯಿ ಮತ್ತು ಒಣಗಿದ ಕೆಂಪು ಮೆಣಸಿನಕಾಯಿಗಳು. ಎದ್ದು ಕಾಣುವ ಹಾಗೆ ಕಟ್ಟಿಂಗ್–ಶೇವಿಂಗ್ ಸೇವಾ ದರ ಪಟ್ಟಿ.

ಸಾಲಾಗಿ ನಾಲ್ಕು ಸಿಂಹಾಸನದಂತಹ ಕುರ್ಚಿಗಳು. ಅದರ ಪಕ್ಕದಲ್ಲಿ ಕೈಚಳಕ ಪ್ರದರ್ಶಿಸಲು ಸಿದ್ಧವಾಗಿ ನಿಂತಿರುವ ಕೆಲಸಗಾರರು. ಒಂದು ಕುರ್ಚಿ ಯಾವಾಗಲೂ ಖಾಲಿ ಇರುತ್ತಿತ್ತು. ಅದೇಕೆ ಎಂದು ನನಗೆ ಬಹಳ ಕುತೂಹಲ. ಸುಮಾರು ತಿಂಗಳ ನಂತರ ತಿಳಿದದ್ದೇನೆಂದರೆ, ಅದು ಗ್ರಾಹಕರನ್ನು ಸೆಳೆಯಲು ಮಾಲೀಕರು ಮಾಡಿರುವ ತಂತ್ರ!

ಮತ್ತೊಂದು ಕಡೆ ಗ್ರಾಹಕರು ಸರದಿ ಪ್ರಕಾರ ಕುಳಿತುಕೊಳ್ಳಲು ಗೋಡೆಗೆ ಅಂಟಿಕೊಂಡಂತೆ ಉದ್ದನೆಯ ಬೆಂಚು. ಅದರ ಮುಂದಿನ ಟೀಪಾಯ್ ಮೇಲೆ ಹರಡಿರುವ ದಿನಪತ್ರಿಕೆಗಳು, ಸಿನಿಮಾ ನಿಯತಕಾಲಿಕಗಳು. ಅವುಗಳ ಜತೆ ಒಂದು ತಮಿಳು ಮತ್ತು ತೆಲುಗು ಪತ್ರಿಕೆ!

ಸಾರ್ವಜನಿಕ ರಜೆ ದಿನಗಳು ಮತ್ತು ವಾರಾಂತ್ಯದಲ್ಲಿ ಹೆಚ್ಚು ಗ್ರಾಹಕರು ಬರುತ್ತಿದ್ದರು. ತಮ್ಮ ಸರದಿಗಾಗಿ ಸಾಲುಗಟ್ಟಿ ಸುಮಾರು ಎರಡು ಮೂರು ಗಂಟೆ ಕಾಲ ಕಾಯಬೇಕಾಗಿತ್ತು. ನಾನು ಮೊದಲ ಗ್ರಾಹಕನಾಗಲು ಬೆಳಗ್ಗೆ ಆರು ಗಂಟೆಗೆ ಷಟರ್ ತೆಗೆಯುವ ಹೊತ್ತಿಗೇ ಅಲ್ಲಿರುತ್ತಿದ್ದೆ. ಅವನು ಬಾಗಿಲು ತೆಗೆದು, ಕೆಳಗೆ ಬಿದ್ದ ಕೂದಲುಗಳ ಕಸ ಗುಡಿಸಿ, ಬಾಗಿಲ ಮುಂದೆ ಎರಡು ಚೊಂಬು ನೀರು ಚಿಮುಕಿಸಿ, ದೇವರ ಪಟದ ಮುಂದೆ ನಿಂತು ದೀಪ ಬೆಳಗಿಸಿ, ಊದುಕಡ್ಡಿ ಹಚ್ಚಿ, ಧೂಪವನ್ನು ಅಂಗಡಿಯಲ್ಲಿರುವ ಎಲ್ಲ ಕುರ್ಚಿಗಳು, ಸಾಧನಗಳಾದ ಕತ್ತರಿ, ಬಾಚಣಿಗೆ, ನೇತು ಹಾಕಿದ ಮಂತ್ರದ ತೆಂಗಿನ ಕಾಯಿ... ಎಲ್ಲಕ್ಕೂ ತೋರಿಸಿ ಮತ್ತೆ ದೇವರ ಪಟದ ಮುಂದೆ ನಿಂತು ಭಕ್ತಿಯಿಂದ ನಮಸ್ಕರಿಸಿ, ಪಕ್ಕದಲ್ಲಿರುವ ಸ್ಯಾನಿಯೋ ಟೇಪ್ ರೆಕಾರ್ಡರ್ ಒತ್ತುತ್ತಿದ್ದನು. ಘಂಟಸಾಲ ಭಗವದ್ಗೀತೆಯಿಂದ ಅವನ ಕಸುಬು ಆರಂಭ. ನಂತರ ಪ್ರದೇಶ ಸಮಾಚಾರ ಮತ್ತು ವಿವಿಧ ಭಾರತಿಯ ಹಾಡುಗಳು. ಎಂದಾದರೂ ಕರೆಂಟ್ ಕೈ ಕೊಟ್ಟರೆ, ಎವರಿ ಡೇ ಶೆಲ್ ಬ್ಯಾಟರಿ ಸಿದ್ಧವಾಗಿರುತ್ತಿತ್ತು.

ಕ್ಷೌರಿಕನ ಕೈಗೆ ತಲೆ ಕೊಟ್ಟರೆ ಮುಗಿಯಿತು, ಮುಂದೆ ಅವನೇ ಅದರ ಸೂತ್ರಧಾರ. ಬಲಗಡೆ, ಎಡಗಡೆ, ನೇರ – ಹೀಗೆ ಆತ ತಿರುಗಿಸಿದಂತೆ ತಿರುಗಬೇಕು, ನಮ್ಮ ತಲೆಯೀಗ ಅವನ ಕೈಯ ಚೆಂಡು! ಅದಕ್ಕೇನು ಬಡವ, ಶ್ರೀಮಂತರೆಂಬ ತಾರತಮ್ಯವಿಲ್ಲ.

ಹೇರ್ ಕಟ್ಟಿಂಗ್–ಶೇವಿಂಗ್ ಎರಡೂ ಮುಗಿದ

